**ಮಾನ್ಯ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ದಿನಾಂಕ:27.08.2018 ರಂದು ಅಪರಾಹ್ನ 12:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸಮಸ್ಯೆಗಳ ಬಗ್ಗೆ ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)**

1. ಎಂ.ವಿ.ಸಾವಿತ್ರಿ, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
2. ಎಂ.ಕೆ. ಕೆಂಪೇಗೌಡ, ನಿರ್ದೇಶಕರು(ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
3. ಎನ್.ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
4. ಪಿ.ಎಸ್. ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಪ್ರಶಾಂತ್ ಜಿ., ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಸೆಂಥಿಲ್ ಕುಮಾರ್ ಕೆ., ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
8. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
9. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು, ಗ್ರಾಅಪ ಇಲಾಖೆ, ಬೆಂಗಳೂರು.

ನಿರ್ದೇಶಕರು (ಇ-ಆಡಳಿತ)(ಪ್ರ), ಗ್ರಾಅಪ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು ಹಾಗೂ ಮಾನ್ಯ ಸರ್ಕಾರದ ಕಾರ್ಯದರ್ಶಿಗಳ ನಿರ್ದೇಶನದಂತೆ ಈ ಕೆಳಕಂಡ ವಿಷಯಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಯಿತು.

1. **ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಇ-ಹಾಜರಾತಿಯ ಬಳಕೆಯನ್ನು ಕಡ್ಡಾಯಗೊಳಿಸುವ ಬಗ್ಗೆ.**

   a) ಪ್ರಸ್ತುತ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಇ-ಹಾಜರಾತಿಯನ್ನು ಬಳಸಲಾಗುತ್ತಿದ್ದು, ಬಹಳಷ್ಟು ಸಿಬ್ಬಂದಿಗಳು ಇ-ಹಾಜರಾತಿಯನ್ನು ಬಳಸದೇ ಇರುವುದು ಕಂಡುಬಂದಿದೆ. ಹಾಗೂ ಕಲಬುರಗಿ, ಯಾದಗಿರಿ, ಕೊಪ್ಪಳ ಜಿಲ್ಲೆಯಲ್ಲಿ ಶೇಕಡ 10ಕ್ಕಿಂತ ಕಡಿಮೆ ಗ್ರಾಮ ಪಂಚಾಯತಿಗಳಲ್ಲಿ ಇ-ಹಾಜರಾತಿ ಬಳಸಲಾಗುತ್ತಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

   b) ಗ್ರಾಮ ಪಂಚಾಯತಿಗಳಲ್ಲಿ ಇ-ಹಾಜರಾತಿ ಕಡ್ಡಾಯಗೊಳಿಸುವ ಸಲುವಾಗಿ ಗ್ರಾಮ ಪಂಚಾಯತಿಗಳ ನೌಕರರು ಕಡ್ಡಾಯವಾಗಿ ಇ-ಹಾಜರಾತಿ ಬಳಸುವಂತೆ ಮೇಲ್ವಿಚಾರಣೆ ಮಾಡುವುದು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಎಲ್ಲಾ ನೌಕರರು ಕಡ್ಡಾಯವಾಗಿ ಇ-ಹಾಜರಾತಿ ಬಳಸುವಂತೆ ಮೇಲ್ವಿಚಾರಣೆ ಮಾಡುವುದು ಹಾಗೂ ಗ್ರಾಮ ಪಂಚಾಯತಿ ನೌಕರರ ವೇತನವನ್ನು ಇ-ಹಾಜರಾತಿಯ ಆಧಾರದ ಮೇಲೆ ಪಾವತಿಸುವಂತೆ ಕ್ರಮ ವಹಿಸುವಂತೆ ನಿರ್ದೇಶನ ನೀಡಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ಸೂಚಿಸಿದರು.

ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸದರಿ ಮೇಲ್ವಿಚಾರಣೆಯನ್ನು ಮಾಡದೇ ಇದ್ದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವೇತನವನ್ನು ಕಡಿತ ಮಾಡಲು ಕ್ರಮವಹಿಸುವಂತೆ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

c) ತಾಲ್ಲೂಕು ಪಂಚಾಯತಿಗಳಲ್ಲಿ ಇ-ಹಾಜರಾತಿ ಕಡ್ಡಾಯಗೊಳಿಸುವ ಸಲುವಾಗಿ ತಾಲ್ಲೂಕು ಪಂಚಾಯತಿಗಳ ನೌಕರರು ಕಡ್ಡಾಯವಾಗಿ ಇ-ಹಾಜರಾತಿ ಬಳಸುವಂತೆ ಮೇಲ್ವಿಚಾರಣೆ ಮಾಡುವುದು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಎಲ್ಲಾ ನೌಕರರು ಕಡ್ಡಾಯವಾಗಿ ಇ-ಹಾಜರಾತಿ ಬಳಸುವಂತೆ ಮೇಲ್ವಿಚಾರಣೆ ಮಾಡಲು ಹಾಗೂ ತಾಲ್ಲೂಕು ಪಂಚಾಯತಿ ನೌಕರರ ವೇತನವನ್ನು ಇ-ಹಾಜರಾತಿಯ ಆಧಾರದ ಮೇಲೆ ಪಾವತಿಸುವಂತೆ ಕ್ರಮವಹಿಸುವುದು.

ಹಾಗೂ ಇ-ಹಾಜರಾತಿಯನ್ನು ಮೇಲ್ವಿಚಾರಣೆ ಮಾಡದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ವೇತನವನ್ನು ಕಡಿತ ಮಾಡಲು ಕ್ರಮವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು DDO ಗಳಿಗೆ ನಿರ್ದೇಶನ ನೀಡಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

d) ಜಿಲ್ಲಾ ಪಂಚಾಯತಿಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು ಹೊರತುಪಡಿಸಿ ಎಲ್ಲಾ ಸಿಬ್ಬಂದಿಗಳು ಇ-ಹಾಜರಾತಿಯನ್ನು ಬಳಸುವಂತೆ ನಿರ್ದೇಶನ ನೀಡುವುದು.

**(ಕ್ರಮ: ನಿರ್ದೇಶಕರು(ಇ-ಆಡಳಿತ)).**

e) ಜಿಲ್ಲಾ ಪಂಚಾಯತಿಗಳಲ್ಲಿ ಇ-ಹಾಜರಾತಿ ಕಡ್ಡಾಯಗೊಳಿಸಲು ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ಇ-ಹಾಜರಾತಿ ಬಳಸುವಂತೆ ಮೇಲ್ವಿಚಾರಣೆ ಮಾಡುವುದು ಹಾಗೂ ಸಿಬ್ಬಂದಿಗಳ ವೇತನವನ್ನು ಇ-ಹಾಜರಾತಿಯ ಆಧಾರದ ಮೇಲೆ ಪಾವತಿಸುವಂತೆ ಕ್ರಮವಹಿಸುವಂತೆ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ DDO ಗಳಿಗೆ ನಿರ್ದೇಶನ ನೀಡಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

f) ಇ-ಹಾಜರಾತಿಯ ವ್ಯವಸ್ಥೆಯಲ್ಲಿ ಸುಧಾರಣೆ ಉದ್ದೇಶದಿಂದ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ Aadhar Based ಇ-ಹಾಜರಾತಿಯನ್ನು ಅನುಷ್ಠಾನ ಮಾಡುವುದು ಸೂಕ್ತವೆಂದು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಅಭಿಪ್ರಾಯಪಟ್ಟರು.

ಹಾಗೂ NIC ಅಧಿಕಾರಿಗಳಿಗೆ ಅಕ್ಟೋಬರ್ ಅಂತ್ಯದೊಳಗೆ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಮಾಡಿ Aadhar Based ಇ-ಹಾಜರಾತಿಯನ್ನು ಅನುಷ್ಠಾನ ಮಾಡುವಂತೆ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ: NIC)**

g) ಪ್ರಸ್ತುತ ಶೇಕಡ 30 ಕ್ಕಿಂತ ಕಡಿಮೆ ಇ-ಹಾಜರಾತಿಯನ್ನು ಬಳಸುವ ಜಿಲ್ಲಾ ಪಂಚಾಯತಿಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪ್ರತ್ಯೇಕವಾಗಿ ಇ-ಹಾಜರಾತಿಯನ್ನು ಕಡ್ಡಾಯವಾಗಿ ಬಳಸುವ ಬಗ್ಗೆ ಅರೆ ಸರ್ಕಾರಿ ಪತ್ರ ಬರೆಯುವುದು.

**(ಕ್ರಮ: ನಿರ್ದೇಶಕರು(ಇ-ಆಡಳಿತ)).**

2. **<u>ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ನಡೆಯುವ ಸಭೆಗಳ Automation ಮಾಡುವ ಬಗ್ಗೆ.</u>**

a) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸಭೆಗಳನ್ನು ನಿಗದಿತ ಸಮಯದೊಳಗೆ ನಡೆಸದೇ ಇರುವುದು ಹಾಗೂ ಸಭೆಗಳನ್ನು ಆಯೋಜಿಸಿದರೂ ಸಹ ಸಭೆಯ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

b) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸಭೆಯನ್ನು ಪಂಚತಂತ್ರ ತಂತ್ರಾಂಶದ ಮೂಲಕ ಕಡ್ಡಾಯವಾಗಿ ಪ್ರಕಟಿಸುವುದು, ಸಭೆ ನಡೆದ 07 ದಿನದೊಳಗೆ ಕಡ್ಡಾಯವಾಗಿ ಪಂಚತಂತ್ರ ತಂತ್ರಾಂಶದಲ್ಲಿ ಸಭೆಯ ನಡವಳಿಗಳನ್ನು ಅಳವಡಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

**(ಕ್ರಮ: ನಿರ್ದೇಶಕರು(ಇ–ಆಡಳಿತ)).**

c) ಸಭೆಯ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸದೇ ಇರುವ ಅಧಿಕಾರಿಗಳಿಗೆ ಸಕಾಲ ತಂತ್ರಾಂಶದ ಮಾದರಿಯಲ್ಲಿ ಕಾರಣ ಕೇಳುವ ನೋಟೀಸುಗಳು ಮೇಲಿನ ಅಧಿಕಾರಿಗಳಿಂದ Generate ಆಗುವಂತೆ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆ ಮಾಡಲು NIC ಅಧಿಕಾರಿಗಳಿಗೆ ತಿಳಿಸಿದರು. (ಗ್ರಾಮ ಪಂಚಾಯತಿಯ ಸಭೆಯ ನಡವಳಿ ಅಳವಡಿಸದೇ ಇರುವ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ರವರಿಂದ ಕಾರಣ ಕೇಳುವ ನೋಟೀಸು Generate ಆಗುವಂತೆ ತಾಲ್ಲೂಕು ಪಂಚಾಯತಿಯ ಸಭೆಯ ನಡವಳಿ ಅಳವಡಿಸದೇ ಇರುವ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಕಾರಣ ಕೇಳುವ ನೋಟೀಸುಗಳನ್ನು Generate ಆಗುವಂತೆ ತಂತ್ರಾಂಶದಲ್ಲಿ ಬದಲಾವಣೆ ಮಾಡುವುದು).

**(ಕ್ರಮ: NIC)**

d) ರಾಜ್ಯ ಮಟ್ಟದಲ್ಲಿ ಸದರಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವುದು.

3. **<u>ಗ್ರಾಮ ಪಂಚಾಯತಿ ನೌಕರರು ವೇತನವನ್ನು e-fms ಮೂಲಕ ಪಾವತಿ ಮಾಡುವ ಬಗ್ಗೆ.</u>**

a) ಗ್ರಾಮ ಪಂಚಾಯತಿ ನೌಕರರ ವೇತನವನ್ನು e-fms ಮೂಲಕ ಪಾವತಿ ಮಾಡಲು ಸರ್ಕಾರವು ನಿರ್ಧರಿಸಿದ್ದು, ಅದರಂತೆ ಪಂಚತಂತ್ರ ತಂತ್ರಾಂಶದಲ್ಲಿ e-fms module ವಿನ್ಯಾಸಗೊಳಿಸಲಾಗಿದೆ ಹಾಗೂ e-fms module ಅನ್ನು ಪರೀಕ್ಷಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

b) ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಅಳವಡಿಸಿದ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯವರು ಅನುಮೋದನೆ ಮಾಡಿದ ಮಾಹಿತಿಯ ಆಧಾರದ ಮೇಲೆ ಶಾಸನಬದ್ಧ ಅನುದಾನದ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವುದಾಗಿ ನಿರ್ದೇಶಕರು, ಪಂಚಾಯತ್ ರಾಜ್–1 ರವರು ಸಭೆಗೆ ತಿಳಿಸಿದರು.

c) ತದನಂತರ ಗ್ರಾಮ ಪಂಚಾಯತಿ ನೌಕರರ ವೇತನವನ್ನು e-fms ಮೂಲಕ ಪಾವತಿ ಮಾಡಬಹುದಾಗಿದೆ ಎಂದು ನಿರ್ದೇಶಕರು, ಪಂಚಾಯತ್ ರಾಜ್–1 ರವರು ಸಭೆಗೆ ತಿಳಿಸಿದರು.

d) 92 ಗ್ರಾಮ ಪಂಚಾಯತಿಯವರು ಪಂಚತಂತ್ರ ತಂತ್ರಾಂಶದಲ್ಲಿ ಯಾವುದೇ ನೌಕರರ ಮಾಹಿತಿ ಅಳವಡಿಸದೇ ಇರುವುದು ಕಂಡುಬಂದಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

e) ಸದರಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಲು ಹಾಗೂ ಸದರಿ ಗ್ರಾಮ ಪಂಚಾಯತಿಗಳಿಗೆ ಮಾಹಿತಿಯನ್ನು ಅಳವಡಿಸಲು ಅವಕಾಶ ನೀಡಲು ಮಾನ್ಯ ಕಾರ್ಯದರ್ಶಿ (ಪಂ.ರಾಜ್) ರವರು ನಿರ್ದೇಶಕರು (ಪಂರಾಜ್-1) ರವರಿಗೆ ತಿಳಿಸಿದರು.

**(ಕ್ರಮ: ನಿರ್ದೇಶಕರು (ಪಂ.ರಾಜ್-1)**

4. **ಗ್ರಾಮ ಪಂಚಾಯತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.**

a) ಗ್ರಾಮ ಪಂಚಾಯತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಸ್ಥಾಪಿಸಲು ಈಗಾಗಲೇ ಸರ್ಕಾರವು ನಿರ್ಧರಿಸಿದೆ. ಅದರಂತೆ ಎಲ್ಲಾ ಗ್ರಾಮ ಪಂಚಾಯತಿಯ ಡಾಟಾಎಂಟ್ರಿ ಆಪರೇಟರ್‌ಗಳಿಗೆ ತರಬೇತಿಯನ್ನು ನೀಡಿ ಪ್ರಮಾಣೀಕರಿಸಲಾಗಿದ್ದು ಎಲ್ಲಾ ಗ್ರಾಮ ಪಂಚಾಯತಿಯ Desktop Computer ಗಳಲ್ಲಿ Aadhaar UCL ಅನ್ನು ಅಳವಡಿಸಲಾಗಿದೆ ಎಂದು ನಿರ್ದೇಶಕರು (ಪಂ.ರಾಜ್-1) ರವರು ಸಭೆಗೆ ತಿಳಿಸಿದರು.

b) ಗ್ರಾಮ ಪಂಚಾಯತಿಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ಉದ್ಘಾಟನೆ ಮಾಡುವ ಬಗ್ಗೆ ದಿನಾಂಕ ಮತ್ತು ಸ್ಥಳದ ವಿವರವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಿಂದ ಪಡೆಯಬಹುದಾಗಿದೆ ಎಂದು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

c) ಉದ್ಘಾಟನೆ ಸಮಾರಂಭದ ದಿನಾಂಕ ಮತ್ತು ಸ್ಥಳದ ವಿವರವನ್ನು ಪಡೆಯಲು ಹಾಗೂ ಪತ್ರಿಕಾ ಪ್ರಕಟಣೆ ಮತ್ತು ಪತ್ರಿಕಾ ಜಾಹೀರಾತು ವಿನ್ಯಾಸದ ಅನುಮೋದನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಕಡತವನ್ನು ಮಂಡಿಸಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

**(ಕ್ರಮ: ನಿರ್ದೇಶಕರು(ಇ-ಆಡಳಿತ)**

5. **ಬಾಪೂಜಿ ಸೇವಾ ಕೇಂದ್ರ ಸೇವೆಗಳ ವಿತರಣೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ.**

a) ಕಂದಾಯ ಇಲಾಖೆಯ ಪಹಣಿ ಪತ್ರ ವಿತರಣೆ ವ್ಯವಸ್ಥೆಯಲ್ಲಿ ತಾಂತ್ರಿಕ ಬದಲಾವಣೆ ತಂದಿದ್ದು, ಸದರಿ ಬದಲಾವಣೆಯಿಂದ ಗ್ರಾಮ ಪಂಚಾಯತಿಗಳಿಂದ ಪಹಣಿ ಪತ್ರ ವಿತರಣೆಯು ಸ್ಥಗಿತಗೊಂಡಿದೆ ಹಾಗೂ ನಾಡಕಛೇರಿ ಸೇವೆಗಳ ವಿತರಣೆಯಲ್ಲಿ ಕಂದಾಯ ಇಲಾಖೆಯಿಂದ ಆಡಳಿತ ಸಮಸ್ಯೆಗಳಿವೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

b) ಪಹಣಿ ಪತ್ರ ಹಾಗೂ ನಾಡಕಛೇರಿ ಸೇವೆಗಳ ವಿತರಣೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನು ಏರ್ಪಡಿಸಲು ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ಸೂಚಿಸಿದರು.

**(ಕ್ರಮ: ನಿರ್ದೇಶಕರು(ಇ-ಆಡಳಿತ).**

c) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 43 ಸೇವೆಗಳ ಪ್ರಮಾಣ ಪತ್ರ ವಿತರಣೆಯಲ್ಲಿ standardization ಮಾಡುವ ಸಲುವಾಗಿ ಎಲ್ಲಾ ಸೇವೆಯ ಪ್ರಮಾಣ ಪತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ digital ಸಹಿಯೊಂದಿಗೆ ವಿತರಣೆ ಮಾಡಲು ಈಗಾಗಲೇ ತೀರ್ಮಾನಿಸಿದ್ದು, ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಲು NIC ರವರಿಗೆ ಈಗಾಗಲೇ ತಿಳಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

d) ಪ್ರಸ್ತುತ ಗ್ರಾಅಪ ಇಲಾಖೆಯ 43 ಸೇವೆಗಳಲ್ಲಿ ಫಲಾನುಭವಿ ಸಂಬಂಧಿತ, ನಿರ್ವಹಣೆ ಸಂಬಂಧಿತ ಹಾಗೂ ತೆರಿಗೆ ಸಂಬಂಧಿತ ಸೇವೆಗಳಿದ್ದು, ಸದರಿ 43 ಸೇವೆಗಳನ್ನು ಪರಿಷ್ಕರಿಸುವ ಅವಶ್ಯಕತೆಯಿರುತ್ತದೆ ಎಂದು ನಿರ್ದೇಶಕರು(ಪಂ.ರಾಜ್-1) ರವರು ಸಭೆಗೆ ತಿಳಿಸಿದರು.

e) ಗ್ರಾಅಪ ಇಲಾಖೆಯ 43 ಸೇವೆಗಳನ್ನು ಪರಿಷ್ಕರಿಸುವ ಬಗ್ಗೆ ಸಭೆಯನ್ನು ಏರ್ಪಡಿಸಲು ಮಾನ್ಯ ಕಾರ್ಯದರ್ಶಿಯವರು ಸಭೆಗೆ ಸೂಚಿಸಿದರು.

**(ಕ್ರಮ: ನಿರ್ದೇಶಕರು(ಇ-ಆಡಳಿತ))**

f) ಗ್ರಾಅಪ ಇಲಾಖೆಯ ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಣೆ ಮಾಡಲು ಹಾಗೂ ಗ್ರಾಮ ಪಂಚಾಯತಿಯ ಕರವನ್ನು ಆನ್‌ಲೈನ್ ಮೂಲಕ ಪಾವತಿಸಲು Payment Gateway ಅವಶ್ಯಕತೆಯಿರುತ್ತದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

g) Payment Gateway ಸೇವೆಯನ್ನು ನೀಡುವುದಾಗಿ Axis Bank, ICICI Bank, HDFC Bank ಮತ್ತು YES Bank ರವರು ಪ್ರಸ್ತಾವನೆಯನ್ನು ನೀಡಿರುತ್ತಾರೆ.

h) ಸದರಿ ಬ್ಯಾಂಕ್ ರವರಿಂದ Payment Gateway ಬಗ್ಗೆ Presentation ನೀಡಲು ತಿಳಿಸುವುದು ಹಾಗೂ ತದನಂತರ ಬ್ಯಾಂಕ್‌ನವರು ನೀಡಿದ ಪ್ರಸ್ತಾವನೆಯನ್ನು ಪರಿಶೀಲಿಸಿ Payment Gateway ಅನ್ನು ಪಡೆಯಲು ತೀರ್ಮಾನಿಸುವುದಾಗಿ ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರು ಸಭೆಗೆ ತಿಳಿಸಿದರು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂ:**ಗ್ರಾಅಪ/21/ಗ.ಕೋಶ/2018
**ದಿನಾಂಕ:**29.08.2018

(ಎಂ.ವಿ.ಸಾವಿತ್ರಿ)
ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ನಿರ್ದೇಶಕರು (ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
2. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
3. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಸೆಂಥಿಲ್ ಕುಮಾರ್ ಕೆ., ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
6. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
7. ತಾಂತ್ರಿಕ ಸಮಾಲೋಚಕರು, ಗ್ರಾಅಪ ಇಲಾಖೆ, ಬೆಂಗಳೂರು.

**ಪ್ರತಿ:**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.